ಅ) ಉಡುಪಿ ತಾಲ್ಲೂಕು ಕಛೇರಿಯಲ್ಲಿ ಗಣಕೀಕೃತ ಪಹಣಿ ಪತ್ರಿಕೆ ನೀಡುವಾಗ ಹಲವಾರು ತೊಡಕು ವಿಳಂಬ ನೀತಿಯಿಂದಾಗಿ ನಾಗರೀಕರ ಕೆಲಸ ಕಾರ್ಯಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಖಾತಾ ಬದಲಾವಣೆಗೆ ಸಂಬಂಧಿಸಿದ ಗಣಕೀಕೃತ ಸಾಫ್ಟ್‌ವೇರ್‌ನ ಲೋಪವನ್ನು ಸರಿಪಡಿಸುವ ವಿಚಾರದಲ್ಲಿ ತಹಶೀಲ್ದಾರ್‌ರಿಂದ ಸರ್ಕಾರಕ್ಕೆ ವರದಿ ಬಂದಿದೆಯೇ ;

ಇ) ಬಂದಿದ್ದಲ್ಲಿ, ಯಾವಾಗ ಇದನ್ನು ಸರಿಪಡಿಸಿ ನಾಗರೀಕರ ಸಮಸ್ಯೆಗಳನ್ನು ಪರಿಹರಿಸಲಾಗುವುದು ;

ಈ) ಉಡುಪಿ ತಾಲ್ಲೂಕಿನ ಕಾಪು ಹೋಬಳಿಗೆ ಯಾವಾಗ ಗಣಕೀಕೃತ ಪಹಣಿ ಕೇಂದ್ರವನ್ನು ಮಂಜೂರು ಮಾಡಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

ಅ) ಇಲ್ಲ

ಆ) ಖಾತಾ ಬದಲಾವಣೆಗೆ ಸಂಬಂಧಿಸಿದ ಭೂಮಿ ಸಾಫ್ಟ್‌ವೇರ್‌ನಲ್ಲಿನ ಲೋಪವನ್ನು ಸರಿಪಡಿಸಲು ಕೋರಿ ಸರ್ಕಾರವು ಮನವಿ ಸ್ವೀಕರಿಸಿದೆ.

ಇ) ಇದನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದ್ದು, ಇನ್ನು 15 ದಿನಗಳಲ್ಲಿ ಪರಿಹಾರ ಒದಗಿಸಲಾಗುವುದು.

ಈ) ನೆಮ್ಮದಿ ಯೋಜನೆಯಡಿ ದಿನಾಂಕ 11.12.2006 ರಂದು ಗಣಕೀಕೃತ ಪಹಣಿ ವಿತರಣಾ ಕೇಂದ್ರವನ್ನು ಕಾಪು ಹೋಬಳಿಯಲ್ಲಿ ಪ್ರಾರಂಭಿಸಲಾಗಿದೆ.

253 (924) – ಶ್ರೀ ರಘುಪತಿ ಭಟ್ ಕೆ. (ಉಡುಪಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಸಾಮಾಜಿಕ ಭದ್ರತಾ ವಿಮೆ ಯೋಜನೆಯಡಿ ಬಾಕಿಯಿರುವ ಪರಿಹಾರ ವಿತರಣೆ ಯಾವ ವರ್ಷದವರೆಗೆ ವಿತರಿಸಲಾಗಿದೆ ಹಾಗೂ ಎಷ್ಟು ವರ್ಷಗಳಿಂದ ಬಾಕಿ ಉಳಿದಿದೆ ;

ಆ) ಪ್ರಸ್ತುತ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ ಪರಿಹಾರ ವಿತರಿಸಲು ಬಾಕಿ ಇರುವ ಅರ್ಜಿಗಳೆಷ್ಟು ಹಾಗೂ ಹಣಕಾಸಿನ ಕೊರತೆ ಇರುವುದು ನಿಜವೇ ;

ಇ) ಹಾಗಿದ್ದಲ್ಲಿ, ಬಾಕಿ ಇರುವ ಸಂತ್ರಸ್ಥರಿಗೆ ವಿತರಿಸಲು ಬೇಕಾಗುವ ಹಣ ಎಷ್ಟು ;

ಈ) ಬಾಕಿ ಅರ್ಜಿದಾರರಿಗೆ ಪರಿಹಾರ ಧನವನ್ನು ಯಾವಾಗ ವಿತರಿಸಲಾಗುವುದು ;

ಉ) ಬಾಕಿ ಅನುದಾನ ಬಿಡುಗಡೆಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಯಾರಿಗೆ-ಯಾವಾಗ ಸಲ್ಲಿಸಲಾಗಿದೆ, ಅದಕ್ಕೆ ಸರ್ಕಾರದ ನಿಲುವೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

ಅ) 1999ನೇ ಸಾಲಿನವರೆಗೆ ಅಂಶಿಕವಾಗಿ ವಿತರಿಸಲಾಗಿದೆ. 1999ನೇ ಸಾಲಿನ ಇನ್ನು 81 ಪ್ರಕರಣಗಳು ಬಾಕಿ ಇರುತ್ತವೆ.

ಆ) ಬಾಕಿ ಇರುವ ಅರ್ಜಿಗಳು 3475.

ಹೌದು.

ಇ) ರೂ. 3,47,30,000.00

ಈ) ರಾಜ್ಯದ ಎಲ್ಲಾ ಜಿಲ್ಲೆಗಳ ಬೇಡಿಕೆಗಳನ್ನು ಅನುಸರಿಸಿ ಬಾಕಿ ಇರುವ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ಪ್ರಸ್ತಾವನೆ ಸಲ್ಲಿಸಲಾಗಿದೆ. ಬಾಕಿ ಅನುದಾನದ ಬಿಡುಗಡೆ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

254 (925) – ಶ್ರೀ ರಘುಪತಿ ಭಟ್ ಕೆ. (ಉಡುಪಿ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ತೀರದಲ್ಲಿ ಸಿ.ಆರ್.ಝಡ್ ನಿಯಮದಿಂದಾಗಿ ಬಡ ನಿವೇಶನ ರಹಿತರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸಿ.ಆರ್.ಝಡ್. ನಿಯಮ ಸಡಿಲಿಕೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಸಿ. ಚನ್ನಿಗಪ್ಪ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)–

ಅ) ಬಂದಿರುತ್ತದೆ.